# ನಗರಸಭಾ ಕಾರ್ಯಾಲಯ, ತುಮಕೂರು.

ನಂ.ನಸತು/ತಾಂಶಾ/ಟೆಂಡರ್/ಸೀಆರ್/ /2009–10 ದಿನಾಂಕ: 03–10–2009.

## ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ನಗರಸಭೆಯ 2008–09ನೇ ಸಾಲಿನ ಶೇ. 18ರ ಯೋಜನೆ ಹಾಗೂ ನಗರಸಭಾ ನಿಧಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ನಿರ್ವಹಿಸಲು ಅರ್ಹ ನೊಂದಾಯಿತ ಪೂರೈಕೆದಾರರು / ಗುತ್ತಿಗೆದಾರರಿಂದ ಹಾಗೂ ಹೈಮಾಸ್ಟ್ ದೀಪಗಳನ್ನು ಅಳವಡಿಸಲು ಆಸಕ್ತಿಯುಳ್ಳ ತಯಾರಕರು ಅಥವಾ ಅಧಿಕೃತ ಮಾರಾಟಗಾರರು ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಟೆಂಡರ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು.

1. ಟೆಂಡರ್ ಫಾರಂಗಳನ್ನು ನೀಡುವ **ದಿನಾಂಕ 09–10–2009 ರಿಂದ 27–10–2009** ರವರಗೆಗೆ ಕಛೇರಿಯ ವೇಳೆಯಲ್ಲಿ ಟೆಂಡರ್ ಶುಲ್ಕ ಪಾವತಿಸಿದ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವುದು.
2. ಭರ್ತಿ ಮಾಡಿದ ಫಾರಂಗಳನ್ನು **ದಿನಾಂಕ 28–10–2009 ರಂದು 4.30 ಗಂಟೆಯೊಳಗಾಗಿ** ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.
3. **ಸಲ್ಲಿಸಲಾಗಿರುವ ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ 28–10–2009 ರಂದು 4.45** ಗಂಟೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಮರುದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

| ಕ್ರ.ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ ರೂಗಳಲ್ಲಿ | ಟೆಂಡರ್ ಫಾರಂ ಬೆಲೆ | ಗುತ್ತಿಗೆದಾರರು | ಕಾಲಾವಧಿ |
|---|---|---|---|---|---|---|
| 1 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳಿಗೆ ಸೋಲಾರ್ ವಾಟರ್ ಹೀಟರ್ ಮತ್ತು ಸೋಲಾರ್ ದೀಪಗಳನ್ನು ಸರ ಬರಾಜು ಮಾಡಿ ಅಳವಡಿಸುವುದು. | 50.00 | 50,000.00 | 5000+ ತೆರಿಗೆ | ತಯಾರಕರು ಅಥವಾ ಅಧಿಕೃತ ಮಾರಾಟಗಾರರು | 30 ದಿನಗಳು |
| 2 | ವಾರ್ಡ್ ನಂ. 20ರ ಎನ್.ಆರ್. ಕಾಲೋನಿಯಲ್ಲಿ ಹೈಮಾಸ್ಟ್ ದೀಪ ಅಳವಡಿಸುವ ಕಾಮಗಾರಿ. | 6.00 | 15000.00 | 500+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ 3ನೇ ದರ್ಜೆ ಮತ್ತು ಮೇಲ್ಪಟ್ಟ ವಿದ್ಯುತ್ ಗುತ್ತಿಗೆದಾರರು | 40 ದಿನಗಳು |
| 3 | ವಾರ್ಡ್ ನಂ. 9ರ ಹೆಗ್ಗಡೆ ಕಾಲೋನಿ ಯಲ್ಲಿ ಹೈಮಾಸ್ಟ್ ದೀಪ ಅಳವಡಿ ಸುವುದು. | 6.00 | 15000.00 | 500+ ತೆರಿಗೆ | ಡಿಟೋ | 40 ದಿನಗಳು |
| 4 | ನಳಂದ ಕಾನ್ವೆಂಟ್ ಹತ್ತಿರ ಹೈಮಾಸ್ಟ್ ದೀಪ ಅಳವಡಿ ಸುವುದು. | 6.00 | 15000.00 | 500+ ತೆರಿಗೆ | ಡಿಟೋ | 40 ದಿನಗಳು |
| 5 | ಹನುಮಂತಪುರ ಮುಖ್ಯ ರಸ್ತೆಯ ಕೊಲ್ಲಾಪುರದಮ್ಮ ದೇವಸ್ಥಾನದ ಹತ್ತಿರ ಯುಜಿಡಿ ಪೈಪ್‌ಲೈನ್‌ನ್ನು ಹೊಸದಾಗಿ ಅಳವಡಿಸುವುದು. | 0.70 | 1750.00 | 500+ ತೆರಿಗೆ | ಪಿಡಬ್ಲ್ಯೂಡಿಯಲ್ಲಿ ನೊಂದಾಯಿತ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು | 20 ದಿನಗಳು |
| 6 | ಗಾರ್ಡನ್ ಮುಖ್ಯ ರಸ್ತೆಯಲ್ಲಿ ಹಾಲಿ ಇರುವ 500 ಎಂಎಂ ವ್ಯಾಸದ ಆರ್‌ಸಿಸಿ ಪೈಪ್‌ನ್ನು ತೆಗೆದು ಹೊಸ ಪೈಪ್‌ಲೈನ್ ಅಳವಡಿಸುವುದು. | 0.80 | 2000.00 | 500+ ತೆರಿಗೆ | --''-- | 20 ದಿನಗಳು |
| 7 | ವಾರ್ಡ್ ನಂ. 1 ರಿಂದ 10 ರವರೆಗೆ ಹೊಸದಾಗಿ ಕೊಳವೆ ಬಾವಿ ಕೊರೆಯುವುದು. | 9.95 | 24875.00 | 1000+ ತೆರಿಗೆ | --''-- | 20 ದಿನಗಳು |
| 8 | ವಾರ್ಡ್ ನಂ. 11 ರಿಂದ 20 ರವರೆಗೆ ಹೊಸದಾಗಿ ಕೊಳವೆ ಬಾವಿ ಕೊರೆಯುವುದು. | 9.95 | 24875.00 | 1000+ ತೆರಿಗೆ | --''-- | 20 ದಿನಗಳು |
| 9 | ವಾರ್ಡ್ ನಂ. 21 ರಿಂದ 30 ರವರೆಗೆ ಹೊಸದಾಗಿ | 9.95 | 24875.00 | 1000+ | --''-- | 20 |

| | | | | | | |
|---|---|---|---|---|---|---|
| | ಕೊಳವೆ ಬಾವಿ ಕೊರೆಯುವುದು. | | | ತೆರಿಗೆ | | ದಿನಗಳು |
| 10 | ವಾರ್ಡ್ ನಂ. 31 ರಿಂದ 35 ರವರೆಗೆ ಹೊಸದಾಗಿ ಕೊಳವೆ ಬಾವಿ ಕೊರೆಯುವುದು. | 6.00 | 15000.00 | 1000+ ತೆರಿಗೆ | --''-- | 20 ದಿನಗಳು |
| 11 | 500 ಎಂ.ಎಂ., 800 ಎಂಎಂ ಕಾಂಕ್ರೀಟ್ ಪೈಪ್‌ಗಳನ್ನು ಸರಬರಾಜು ಮಾಡುವುದು. | – | 10000.00 | 1000+ ತೆರಿಗೆ | --''-- | 20 ದಿನಗಳು |
| 12 | ವಾರ್ಡ್ ನಂ. 10ರ ಪಿ.ಹೆಚ್. ಕಾಲೋನಿ 7ನೇ ಕ್ರಾಸ್ ಅಜಾದ್ ಪಾಕ್ ಹತ್ತಿರ ಯುಜಿಡಿ ಪೈಪ್‌ಲೈನ್ ಅಳವಡಿಸುವುದು. 110 ಮೀಟರ್ | 0.60 | | | --''-- | 20 ದಿನಗಳು |

## ಷರತ್ತುಗಳು

1. ಟೆಂಡರ್ ಫಾರಂ ಬೆಲೆಯನ್ನು ನಗದಾಗಿ ನಗರಸಭೆಯ ನಗದು ಶಾಖೆಯಲ್ಲಿ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಸಲ್ಲಿಸುವಾಗ ತಯಾರಕರು ಅಥವಾ ಅಧಿಕೃತ ಮಾರಾಟಗಾರರಾಗಿದ್ದರೆ ಅಥವಾ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರಾದಲ್ಲಿ ಪ್ರಮಾಣ ಪತ್ರವನ್ನು ಹಾಜರುಪಡಿಸಿ ದಾಖಲಾತಿ ಪುಸ್ತಕ (ಪಾಸ್ ಬುಕ್)ದಲ್ಲಿ ದಾಖಲಾತಿ ಮಾಡಿಸಿಕೊಳ್ಳಬೇಕು.
2. ಇಎಂಡಿ ಹಣವನ್ನು ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿಗೆ ಜಮಾ ಮಾಡಬಹುದಾದಂತಹ ಡಿಡಿ / ಎಫ್‌ಡಿಆರ್‌ಗಳನ್ನು ಅಥವಾ ನಗರಸಭಾ ಕಾರ್ಯಾಲಯದಲ್ಲಿ ಜಮಾ ಮಾಡಿ ರಸೀದಿಯೊಂದಿಗೆ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು.
3. ಟೆಂಡರ್ ಫಾರಂನಲ್ಲಿ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
4. ಮೇಲೆ ನಿಗಧಿಪಡಿಸಿರುವ ಯಾವುದೇ ದಿನಾಂಕಗಳು ಸರ್ಕಾರಿ ರಜಾ ದಿನಗಳೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.
5. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಮೇಲಿನ ಕಾಮಗಾರಿಯಲ್ಲಿ ಏನಾದರೂ ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
8. ಕಾಮಗಾರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು.
9. ಟೆಂಡರ್ ಫಾರಂಗಳನ್ನು ಪಡೆಯುವ ಸಂದರ್ಭದಲ್ಲಿ ಮತ್ತು ಟೆಂಡರ್ ಸಲ್ಲಿಸುವ ಸಮಯದಲ್ಲಿ ಪಾಸ್ ಬುಕ್‌ನಲ್ಲಿ ರೆಕಾರ್ಡ್ ಮಾಡಿಸಿಕೊಳ್ಳಬೇಕು.
10. ಗುತ್ತಿಗೆದಾರರು ಟೆಂಡರ್ ಸಲ್ಲಿಸುವಾಗ 'ಬಿ' ಷೆಡ್ಯೂಲ್‌ನಲ್ಲಿ ದರಗಳನ್ನು ನಮೂದಿಸುವಾಗ ಸ್ಪಷ್ಟವಾಗಿ ಒಂದೇ ರೀತಿಯ ಬರವಣಿಗೆಯಲ್ಲಿ ಪ್ರತಿ ಪುಟಕ್ಕೂ ಸಹಿಯೊಂದಿಗೆ ಯಾವುದೇ ರೀತಿಯ ವ್ಯತ್ಯಾಸವಾಗದಂತೆ ನಮೂದಿಸಬೇಕು. ಇಲ್ಲವಾದಲ್ಲಿ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.
11. ಈ ಕಾಮಗಾರಿಗಳಿಗೆ ಕಾರ್ಯಾದೇಶದ ನೀಡಿದ ದಿನಾಂಕದಿಂದ 24 ಗಂಟೆಗಳೊಳಗಾಗಿ ಖಡ್ಡಾಯವಾಗಿ ಕಾಮಗಾರಿ ಪ್ರಾರಂಭಿಸತಕ್ಕದ್ದು.
12. ಅಪಘಾತಗಳು ಉಂಟಾದಲ್ಲಿ / ಪ್ರಾಣ ಹಾನಿ ಉಂಟಾದಲ್ಲಿ ನಗರಸಭೆ ಜವಾಬ್ದಾರರಾಗಿರುವುದಿಲ್ಲ.
13. ಹೈಮಾಸ್ಟ್ ವಿದ್ಯುತ್ ದೀಪ ಅಳವಡಿಸುವ ಕಾಮಗಾರಿಗಳಿಗೆ 3ನೇ ದರ್ಜೆ ಲೋಕೋಪಯೋಗಿ ವಿದ್ಯುತ್ ಗುತ್ತಿಗೆದಾರರಾಗಿರತಕ್ಕದ್ದು ಅಥವಾ ತಯಾರಕರು, ಅಧಿಕೃತ ಮಾರಾಟಗಾರರು ಹಾಗೂ ಪೂರೈಕೆದಾರರು / ಸರಬರಾಜುದಾರರಾಗಿರತಕ್ಕದ್ದು.
14. ಕ್ರಮ ಸಂಖ್ಯೆ 1ಕ್ಕೆ ಈ ಹಿಂದಿನ ವರ್ಷದಲ್ಲಿ ಕನಿಷ್ಠ 25.00 ಲಕ್ಷ ರೂ.ಗಳ ವಹಿವಾಟು ಮಾಡಿರಬೇಕು. (ಬ್ಯಾಲೆನ್ಸ್ ಸೀಟನ್ನು ಲಗತ್ತಿಸಬೇಕು)
15. ಕ್ರಮ ಸಂಖ್ಯೆ 1ಕ್ಕೆ ಇದೇ ರೀತಿಯ ಕೆಲಸ ನಿರ್ವಹಿಸಿರುವ ಕನಿಷ್ಠ 5 ವರ್ಷಗಳ ಅನುಭವ ದೃಢೀಕರಣ ಪತ್ರ ಲಗತ್ತಿಸತಕ್ಕದ್ದು.
17. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| | | |
|---|---|---|
| **ಸಹಿ/–** | **ಸಹಿ/–** | **ಸಹಿ/–** |
| **ಅಧ್ಯಕ್ಷರು** | **ಉಪಾಧ್ಯಕ್ಷರು** | **ಪೌರಾಯುಕ್ತರು** |
| **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು** | **ನಗರಸಭೆ, ತುಮಕೂರು.** |